ರೀಗೈನ್ ಮಾಡಿಕೊಳ್ಳಬೇಕು. ಜಗತ್ತಿನ ಎಷ್ಟೋ ಜನ ಬಲಾಢ್ಯರು ಆತ್ಮವಿಶ್ವಾಸದ ಕೊರತೆಯಿಂದಾಗಿಯೇ ಸೋತಿದ್ದಾರೆ ಮತ್ತು ಇಂದೂ ಸೋಲುತ್ತಿದ್ದಾರೆ. ನಿನ್ನಲ್ಲಿ ಮತ್ತೊಮ್ಮೆ ಆತ್ಮವಿಶ್ವಾಸ ಚಿಗುರೊಡೆದರೆ ನಿನ್ನನ್ನು ಹಿಂದಿಕ್ಕಿ ಮುಂದೆ ಓಡುತ್ತಿರುವ ಎಲ್ಲರನ್ನೂ ಕೆಲವೇ ಕ್ಷಣಗಳಲ್ಲಿ ನೀನು ಹಿಂದಿಕ್ಕಿ ಮುಂದೆ ಇರುತ್ತೀಯ...' ಎಂದು ಹೇಳುತ್ತಾ ಅವರೂ ಮುಂದೆ ಸಾಗಿಬಿಟ್ಟರು.

ಎಲ್ಲರ ಮಾತುಗಳಿಗಿಂತಲೂ ಡಾಕ್ಟರ್ ಮನೋರಂಜನಿಯವರ ಮಾತುಗಳು ಹಿತವಾಗಿ ಅವನಲ್ಲಿ ಉಲ್ಲಾಸವನ್ನು ತುಂಬಿದ್ದವು. ಹೊಸ ಚೈತನ್ಯವನ್ನು ತುಂಬಿಕೊಂಡು ಅವನು ವೇಗವಾಗಿ ಓಡತೊಡಗಿದ, ಅವನ ಓಟ ಅವನಿಗೇ ನಿಯಂತ್ರಣಕ್ಕೆ ಬರದಂತೆ. ಆಗ ಯಾರೋ ಅವನನ್ನು ಬಲವಾಗಿ ಜಗ್ಗಿದಂತಾಗಿ ನಿದ್ದೆಯಿಂದ ಎಚ್ಚರಗೊಳ್ಳುತ್ತಾನೆ. ತಾನೊಬ್ಬನೇ ಹಾಸಿಗೆಯ ಮೇಲೆ. ರೂಮಿನ ಬಾಗಿಲು ತೆರೆದಿದೆ. ಸಮಯ ಬೆಳಿಗ್ಗೆ ಎಂಟು ಗಂಟೆಯಾಗಿತ್ತು. ಮೈಥಿಲಿ, ಪೂರ್ವಿಕಾ ಜೋರಾಗಿ ನಗುತ್ತಾ ಆಡಿಕೊಳ್ಳುತ್ತಿದ್ದ ಮಾತುಗಳು ಕಿವಿಯನ್ನು ತುಂಬುತ್ತವೆ. ಪೂರ್ವಿಕಾ ಹೇಳುತ್ತಾಳೆ; 'ಮೈಥಿಲಿ, ರಾತ್ರಿ ನನಗೂ ಸೋನಾಗೂ ಸ್ಪೆಷಲ್ ಕಾಕ್‌ಟೇಲ್ ಕೊಡದೆ ಮೋಸ ಮಾಡಿದ್ದೀಯ ನೀನು' ಎಂದು. ಅದಕ್ಕೆ ಮೈಥಿಲಿ ನಗುತ್ತಾ 'ಹೇಗೆ ಗೊತ್ತಾಯ್ತು ನಿಂಗೆ? ಓಹ್, ಎಂಎಸ್ಸಿ ಕೆಮಿಸ್ಟ್ರಿ ಅಲ್ವಾ. ಹೌದು ಕಾಕ್‌ಟೇಲ್‌ಗೆ ಮೊನ್ನೆ ರಾತ್ರಿ ಬೆರೆಸಿದಂತೆ ಬಾಂಗ್ ಮತ್ತು ಸಿಲ್ಡೆನಾಫಿಲ್ ಸಿಟ್ರೇಟ್ ಬೆರೆಸಿರಲಿಲ್ಲ. ಹಾಗಾಗಿ ಅವನು ತುಂಬಾ ಸಾಫ್ಟ್ ಆಗಿದ್ದಿರಬೇಕು. ಮೊನ್ನೆ ಎಷ್ಟೊಂದು ಫೋರ್ಸ್ ಇತ್ತು ಗೊತ್ತಾ ಅವನ ದೇಹದಲ್ಲಿ? ಅಬ್ಬಾ ಇನ್ನಿಲ್ಲದೆ ಸಾಕು ಮಾಡಿದ್ದ. ರಾತ್ರಿ ಎರಡು ಗಂಟೆಯವರೆಗೂ ಅವನ ಪಕ್ಕದಲ್ಲಿಯೇ ಮಲಗಿದ್ದೆ. ಕನಸೇನೋ ಬಿದ್ದಿರಬೇಕು, ವಿಪರೀತ ಕನವರಿಸುತ್ತಿದ್ದ' ಎಂದಳು.

'ಹೌದು, ನಾನು ಬೆಳಗಿನ ಜಾವ ಮೂರು ಗಂಟೆಗೆ ಎಚ್ಚರವಾದಾಗ ಎದ್ದು ಹೋಗಿ ಅವನ ಪಕ್ಕ ಮಲಗಿದ್ದೆ. ಲೇವಿನ್ಸ್ ಮಾತ್ರ ಏನೂ ಕನ್ಸ್ಯೂಮ್ ಮಾಡದೆಯೇ ಸುಸ್ತು ಮಾಡಿ ಯಾರೋ ವಿಐಪಿ ಬಂದರೆಂದು ಅಷ್ಟೊತ್ತಿನಲ್ಲಿ ರೆಸಾರ್ಟ್‌ಗೆ ಹೋದ. ಯು ಆರ್ ಸೋ ಲಕ್ಕಿ. ಸೋನಾನಲ್ಲಿ ಅಂಥ ದೊಡ್ಡ ನಿರೀಕ್ಷೆ ಇಟ್ಟುಕೊಳ್ಳೋಕೆ ಸಾಧ್ಯವಿಲ್ಲ. ನೀನು ಹೇಳಿದಂತೆ ಬೆಳಗಿನ ಆರು ಗಂಟೆಯವರೆಗೂ ವಿಪರೀತ ಕನವರಿಸುತ್ತಿದ್ದ. ಅವನನ್ನ ಚನ್ನಾಗಿ ಟ್ರೈನಪ್ ಮಾಡಬೇಕು' ಪೂರ್ವಿಕಾಳೂ ನಗುತ್ತಾ ಮಾತು ಸೇರಿಸಿದ್ದಳು. ಅವರ ಮಾತುಗಳು ಆಸ್ಕರ್ ವೈಲ್ಡನಲ್ಲಿ ಒಂದು ರೀತಿಯ ಸಂಕೀರ್ಣ ಭಾವವನ್ನು ಮೂಡಿಸಿ ಯಾವುದು ಸರಿ, ಯಾವುದು ತಪ್ಪು ಎನ್ನುವ ಜಿಜ್ಞಾಸೆಯನ್ನು ಹುಟ್ಟಿಹಾಕಿದ್ದವಲ್ಲದೆ ಮಂಕು ಕವಿಯುವಂತೆ ಮಾಡಿದ್ದವು. ಅವರ ಮಾತುಗಳು ಕೂಡ ಮೊನ್ನೆ ರಾತ್ರಿ ಕುಡಿದ ಕಾಕ್‌ಟೇಲ್ ಪಾನೀಯದಂತೆ ಅನ್ನಿಸತೊಡಗಿ ತನಗೆ ತೆರೆದುಕೊಳ್ಳದ ಒಂದು ದೊಡ್ಡ ವಿಚಿತ್ರವಾದರೂ, ವಾಸ್ತವದ ಬೃಹತ್ ಜಗತ್ತೇ ಇದೆಯೆಂದುಕೊಂಡ.

ಆಸ್ಕರ್ ವೈಲ್ಡ್ ಮತ್ತು ಪೂರ್ವಿಕಾಳನ್ನು ಏರ್‌ಪೋರ್ಟ್‌ಗೆ ಡ್ರಾಪ್ ಮಾಡಲು ಮೈಥಿಲಿಯೇ ಕಾರ್ ಡ್ರೈವ್ ಮಾಡಿಕೊಂಡು ಬಂದಿದ್ದಳು. ಬಂದ ದಿನ ಇದ್ದಷ್ಟು ಖುಷಿ ಈಗ ಹೋಗುವಾಗ ಇಲ್ಲವೆನಿಸಿತು ಆಸ್ಕರ್ ವೈಲ್ಡನಿಗೆ. ಆದರೆ ಪೂರ್ವಿಕಾ ಖುಷಿ ಖುಷಿಯಾಗಿಯೇ ಇದ್ದಳು. ಆಸ್ಕರ್ ವೈಲ್ಡನ ಮುಖದಲ್ಲಿನ ಭಾವನೆಗಳನ್ನು ಮೈಥಿಲಿ ಗಮನಿಸಿ 'ಯಾಕೆ ಆಸ್ಕರ್ ಡಲ್ಲಾಗಿದ್ದೀಯ. ಡಿಪಾರ್ಚರ್ ಬೇಸರ ತರಿಸುತ್ತಿದೆಯಾ? ನೆನಪುಗಳನ್ನು ಅವು ಸಿಹಿಯಾಗಿರಲಿ, ಕಹಿಯಾಗಿರಲಿ ನಮ್ಮ ಜೊತೆ ಕ್ಯಾರಿ ಮಾಡಬಾರದು. ನೆನಪುಗಳು ನಮ್ಮ ಬ್ರೈನನ್ನು ಸ್ವಲ್ಪಮಟ್ಟಿಗೆ ಸ್ಥೈರ್ಯಗೆಡಿಸುತ್ತವೆ. ಕಷ್ಟವಿರಲಿ, ಸುಖವಿರಲಿ ಅನುಭವಿಸಿ ಆ ಕ್ಷಣಕ್ಕೆ ಮರೆತುಬಿಡಬೇಕು. ಎಲ್ಲರ ಬದುಕೂ, ನಡೆಯುವ ಎಲ್ಲಾ ಘಟನೆಗಳೂ ಕೇವಲ ಕಾಕತಾಳೀಯ ಮಾತ್ರ ಮತ್ತು ಪೂರ್ವ ನಿರ್ಧರಿತ. ನಾವು ಕೆಟ್ಟದ್ದು ಎಂದು ಪರಿಭಾವಿಸುವ ಎಷ್ಟೋ ಘಟನೆಗಳು ನಮ್ಮ ಅಭ್ಯುದಯಕ್ಕೆ ಕಾರಣವಾಗುತ್ತವೆ. ಈಗ ನೋಡಿ, ಮರೆತೇಬಿಟ್ಟಿದ್ದ ಘಟನೆಯೊಂದು ನೆನಪಾಗುತ್ತಿದೆ. ಅಪ್ಪ ಮಾತುಂಗದಲ್ಲಿ ಸಣ್ಣ ಟ್ರಾವೆಲ್ಸ್ ಆಫೀಸನ್ನು ತೆರೆಯಲು ಸಾರಿಗೆ ಇಲಾಖೆಯಿಂದ ಪರ್ಮಿಟ್ ತೆಗೆದುಕೊಳ್ಳಬೇಕಿತ್ತು. ಸಂಬಂಧಪಟ್ಟ ಅಧಿಕಾರಿ ಸ್ಥಳ ಪರಿಶೀಲನೆಗೆಂದು ಮೂರು ಸಾರಿ ಬಂದು ಏನೇನೋ ತಕರಾರು ತೆಗೆದಿದ್ದ. ಪ್ರತಿ ಸಾರಿ ಬಂದಾಗಲೂ ಅವನ ಕಣ್ಣು ನನ್ನನ್ನು ತಿನ್ನುವಂತೆ ನೋಡುತ್ತಿದ್ದವು. ಅವನ ಉದ್ದೇಶ ನನಗೆ ಸ್ಪಷ್ಟವಾಗಿ ಅರ್ಥವಾಗಿತ್ತು. ಅವನ ಆಫೀಸಿನ ಬಳಿ ಹೋದೆ. ಅವನು ಹೇಳಿದಂತೆ ಒಂದೇ ಒಂದು ಗಂಟೆ ಅವನೊಂದಿಗಿದ್ದೆ. ಸೆಕ್ಸ್ ಅಂದರೇನೆಂದು ಅಂದೇ ತಿಳಿದಿದ್ದು ನನಗೆ. ಒಂದೇ ವಾರದಲ್ಲಿ ಆತ ಲೈಸನ್ಸ್ ಕೊಟ್ಟಿದ್ದನಲ್ಲದೆ ಟ್ರಾವೆಲ್ಸ್‌ಗೆ ಸಂಬಂಧಿಸಿದಂತೆ ಒಂದಿಷ್ಟು ಕಾಂಟ್ರ್ಯಾಕ್ಟ್‌ಗಳನ್ನೂ ಕೊಡಿಸಿಕೊಟ್ಟ. ಅಂದು ನಮ್ಮಪ್ಪ ಆ ಸಣ್ಣ ಟ್ರಾವೆಲ್ಸ್ ಆಫೀಸನ್ನು ತೆರೆಯದಿದ್ದಲ್ಲಿ ಪೂರ್ವಿಕಾಳ ಅಪ್ಪ ನಮಗೆ ಸಹಾಯ ಮಾಡಲೂ ಆಗುತ್ತಿರಲಿಲ್ಲ, ನನಗೆ ಲೇವಿನ್ಸ್ ಸಿಗುತ್ತಲೂ ಇರಲಿಲ್ಲ, ಇಂದು ಲಾಸ್ ವೇಗಾಸ್‌ನಲ್ಲಿ ಇಷ್ಟೊಂದು ಬಿಸಿನೆಸ್ ಎಷ್ಟಾಬ್ಲಿಶ್‌ಮೆಂಟ್ ಮಾಡಲೂ ಸಾಧ್ಯವಾಗುತ್ತಿರಲಿಲ್ಲ. ಆ ಟ್ರಾನ್ಸ್‌ಪೋರ್ಟ್ ಇಲಾಖೆಯ ಅಧಿಕಾರಿಯ ಮುಖ ಕೂಡ ನನಗೆ ನೆನಪಾಗುತ್ತಿಲ್ಲ. ನಾವು ಜಸ್ಟ್ ಲೈಫನ್ನು ಡ್ರೈವ್ ಮಾಡ್ತಾ ಹೋಗಬೇಕು. ಈ ಟ್ರಾವೆಲ್ಸ್ ಹಾಗೂ ಹೋಟೆಲ್ ಬಿಸಿನೆಸ್ ನನಗೆ ಅಗಾಧವಾದ ಅನುಭವಗಳನ್ನು ಕೊಟ್ಟಿದೆ, ಅನನ್ಯ ಪಾಠಗಳನ್ನು ಕಲಿಸಿದೆ. ಸುಖದ ಬೆನ್ನಿಗೆ ಸೂತಕದ ಛಾಯೆ ಅಂಟಿಕೊಳ್ಳದಂತೆ ನಾವು ಎಚ್ಚರಿಕೆಯಿಂದ ಇದ್ದರೆ ಸಾಕು' ಅವಳ ಮಾತುಗಳಲ್ಲಿ ಒಂದಿಷ್ಟೂ ಭಾವುಕತೆಯ ಪಸೆ ಕೂಡ ಇರಲಿಲ್ಲ. ಏರ್‌ಪೋರ್ಟಿನ ಡಿಪಾರ್ಚರ್ ಗೇಟಲ್ಲಿ ಇಬ್ಬರನ್ನೂ ಅಪ್ಪಿ ನಗುನಗುತ್ತಾ ಬೀಳ್ಕೊಟ್ಟು ತೆರಳಿದ್ದಳು ಮೈಥಿಲಿ.

ವಿಮಾನದ ಕಿಟಕಿಯ ಪಕ್ಕದ ಸೀಟಿನಲ್ಲಿ ಕುಳಿತು ಲಾಸ್ ವೆಗಾಸನ್ನು ರಾತ್ರಿಯಲ್ಲಿ ಕಣ್ತುಂಬಿಸಿಕೊಂಡು ಕುಳಿತಿದ್ದ ಆಸ್ಕರ್ ವೈಲ್ಡನ ಮನಸ್ಸು ಕಾರಿನಲ್ಲಿ ಬರುವಾಗ ಮೈಥಿಲಿ ಹೇಳಿದ ಮಾತುಗಳನ್ನು ಅರಗಿಸಿಕೊಳ್ಳಲು ತಿಣುಕಾಡುತ್ತಿತ್ತು. 'ಏಕೋ ಸೋನಾ, ಲಾಸ್ ವೆಗಾಸ್ ಬಿಟ್ಟು ಹೋಗಲಿಕ್ಕೆ ಅಷ್ಟೊಂದು ಬೇಸರ ಆಗ್ತಾ ಇದೆಯಾ? ನೀನು ಮನಸ್ಸು ಮಾಡಿದರೆ ತಿಂಗಳಿಗೊಮ್ಮೆ ಬಂದು ಮೈಥಿಲಿ ಕೈನಲ್ಲಿ ಲಾಸ್ ವೆಗಾಸ್ ಸ್ಪೆಷಲ್ ಕಾಕ್‌ಟೇಲ್ ಕುಡಿದು ಬರಬಹುದು' ಮಾತುಗಳಲ್ಲಿ ಸಂಭ್ರಮ ತುಂಬಿಕೊಂಡೇ ಹೇಳಿದ್ದಳು ಪೂರ್ವಿಕಾ ಅವನ ಭುಜಕ್ಕೆ ತಲೆಯಾನಿಸಿ. 'ಅದಲ್ಲ, ನಾನು ಮೈಥಿಲಿ ಜೊತೆ, ನೀನು ಲೆವಿನ್ಸ್ ಜೊತೆ ಮಲಗಿದ್ದ ಸಂಗತಿ...' ಮುಂದೆ ಏನು ಮಾತನಾಡಬೇಕೆಂಬುದು ತೋಚದೆ ಅವನು ಮಾತು ನಿಲ್ಲಿಸಿದ್ದ.

'ಓಹ್ ನಿನ್ನ ಪ್ರಾಬ್ಲಂ ಅದಾ. ಒಂದು **phrase** ಇದೆ ಇಂಗ್ಲಿಷ್‌ನಲ್ಲಿ, ನೀನು ಓದಿರುವೆಯೋ ಇಲ್ಲವೋ ಗೊತ್ತಿಲ್ಲ ನನಗೆ. **Skin to skin, there is no sin** ಅಂತ. ವಿಶಾಲವಾದ ಮನೋಭಾವ ಇಟ್ಟುಕೊಂಡು ಯೋಚನೆ ಮಾಡು. ನಮ್ಮ ಕ್ಲೋಸ್ ಫ್ರೆಂಡ್ಸ್ ಅಲ್ವಾ ಅವರು. ಇಟ್ಸ್ ಜಸ್ಟ್ ಫನ್. ಈ ತರ ಎಲ್ಲರೊಂದಿಗೂ ನಾವು ಸುಖ ಹಂಚಿಕೊಳ್ಳಲು ಸಾಧ್ಯಾನ ಹೇಳು. ನೀತಿ, ನೈತಿಕತೆಯ ಬಗ್ಗೆ ನನಗೂ ಅಂಜಿಕೆ, ಎಚ್ಚರಿಕೆ ಇದೆ. ಆದರೆ ಅದೇ ಒಂದು ಸ್ಟಿಗ್ಮ ಆಗಬಾರದು. ನಿನಗೆ ಗೊತ್ತಾ, ನಮ್ಮ ದೇಹವೊಂದೇ ಅಲ್ಲ, ಇಡೀ ಜೀವಜಗತ್ತಿನ ಶರೀರಗಳು ರಾಸಾಯನಿಕಗಳಿಂದ ರಚನೆಯಾಗಿವೆ. ಈ ರಾಸಾಯನಿಕಗಳಿಗೆ ನೀತಿ, ನೈತಿಕತೆ, ಧರ್ಮ, ಕರ್ಮಗಳ ಸೋಂಕನ್ನು ಅಂಟಿಸಲು ಸಾಧ್ಯವಾ? ನಾನು ಕೆಮಿಸ್ಟ್ರಿ ಓದಿರುವುದಿಂದ ಇದನ್ನು ಹೇಳಲು ಸಾಧ್ಯ ಆಗ್ತಾ ಇದೆ. ನಮ್ಮ ದೇಹ ಆಕ್ಸಿಜನ್, ಹೈಡ್ರೋಜನ್, ನೈಟ್ರೋಜನ್, ಕ್ಯಾಲ್ಸಿಯಂ, ಪೊಟಾಶಿಯಂ, ಸೋಡಿಯಂ, ಸಲ್ಫರ್, ಮೆಗ್ನೀಷಿಯಮ್ ರಾಸಾಯನಿಕಗಳಿಂದ ಮಾಡಿದ್ದಾಗಿದೆ. ಮೆದುಳು ಕೂಡಾ ನ್ಯೂರೊಟ್ರಾನ್ಸ್‌ಮಿಟರ್ಸ್ ಮತ್ತು ಹಾರ್ಮೋನ್‌ಗಳ ರಾಸಾಯನಿಕ ಕ್ರಿಯೆಯಿಂದಲೇ ರಚನೆಯಾಗಿರುವುದು. ಸ್ಪರ್ಶ, ನೋಟ, ಹಸಿವು, ಕಾಮ ಮುಂತಾದ ಎಲ್ಲಾ ನೈಸರ್ಗಿಕ ಪ್ರವೃತ್ತಿಗಳು ಉತ್ಪಾದನೆಯಾಗಿ ಮನಸ್ಸಿನ ಮೂಲಕ ದೇಹವನ್ನು ನಿಯಂತ್ರಿಸುವುದು ರಾಸಾಯನಿಕಗಳೇ. ಸತ್ಯ–ಮಿಥ್ಯ, ನೈತಿಕತೆ–ಅನೈತಿಕತೆ, ವಾಸ್ತವ–ಭ್ರಮೆ, ಪ್ರೇಮ–ಕಾಮ, ಈ ಎಲ್ಲವುಗಳ ಮಧ್ಯೆ ಇರುವುದು ಒಂದು ತೆಳ್ಳಗಿನ ಸಣ್ಣ ಗೆರೆಯಷ್ಟೆ. ಆದ್ದರಿಂದಲೇ ಪ್ರತಿಯೊಬ್ಬರೂ ಪರಿಮಿತಿಗಳನ್ನು ಮೀರಿ ಅವುಗಳಾಚೆಗಿನ ಸುಖಗಳನ್ನು ಸೂರೆ ಮಾಡಲು ಬಯಸುತ್ತಿರುತ್ತಾರೆ.

ಲೈಫ್ ಈಸ್ **fragile**. ಬಹಳ ಜಾಗರೂಕತೆಯಿಂದ ಹ್ಯಾಂಡ್ಲ್ ಮಾಡ್ಬೇಕು. ಸೈನ್ಸ್‌ನಲ್ಲಿ ಪುನರ್ಜನ್ಮದ ಅಸ್ತಿತ್ವ ಇಲ್ಲವೇ ಇಲ್ಲ. ಹಾಗಾಗಿ ಬದುಕಿದ್ದಷ್ಟೂ ಕಾಲ ಅದನ್ನು ಸಡಗರ, ಸಂಭ್ರಮಗಳಿಂದ ಅನುಭವಿಸುತ್ತಾ ಹೋಗಬೇಕು' ಎಂದು ಹೇಳುತ್ತಾ ಅವನ ಭುಜಕ್ಕೊರಗಿ ನಿದ್ದೆಗೆ ಜಾರಿದ್ದಳು ಪೂರ್ವಿಕಾ.

ಆಸ್ಕರ್ ವೈಲ್ಡನಿಗೆ ನಿದ್ದೆ ಬರಲಿಲ್ಲ. ಬದಲಾಗಿ ತಾನು ಅಧ್ಯಯನ ಮಾಡಿದ ಸಾಹಿತಿಗಳು, ಅವರ ಸಾಹಿತ್ಯ ರಚನೆ ಅವನೊಳಗೆ ಬಿಚ್ಚಿಕೊಂಡಿತ್ತು.

(ಸಶೇಷ)